# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 300 | Pages. 2 | Date: 22-10-2025, WEDNESDAY | RNI NO: KARKAN/2024/89601 | Kannada Daily

ಸಂಪುಟ : 01 - ಸಂಚಿಕೆ : 300 - ಪುಟಗಳು : 2 | 22-10-2025 ಬುಧವಾರ | Ph: 8762954248 | ದರ : ₹1


# ತಗ್ಗಿದ ವರುಣಾರ್ಭಟ-ಮುಗಿಯದ ಗೋಳು

## ಹಳೇಬೀಡಿನಲ್ಲಿ ಛಾವಣಿ ಕುಸಿದು ಸಂಕಷ್ಟ | ಚಳಿಗೆ ಅನಾರೋಗ್ಯ ಭೀತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಾಲ್ಕು ದಿನಗಳಿಂದ ಧಾರಾಕಾರವಾಗಿ ಸುರಿದ ವರುಣಾರ್ಭಟ ಮಂಗಳವಾರ ಕಡಿಮೆಯಾಗಿದೆಯಾದರೂ ಸಾರ್ವಜನಿಕರ ಜೀವನ ಇನ್ನೂ ತಹಬದಿಗೆ ಬಂದಿಲ್ಲ.

ಸೋಮವಾರ ರಾತ್ರಿ ಅರಸೀಕೆರೆ, ಸಕಲೇಶಪುರ, ಅರಕಲಗೂಡು ವ್ಯಾಪ್ತಿಯಲ್ಲಿ ಧಾರಾಕಾರ ಮಳೆಗೆ ನಷ್ಟವುಂಟಾಗಿದೆ. ಬಹುತೇಕ ರಸ್ತೆಗಳು ಜಲಾವೃತವಾಗಿದ್ದು ಕೆರೆ ಕಟ್ಟೆಗಳು ಭರ್ತಿಯಾಗಿ ಕೋಡಿ ಬಿದ್ದಿವೆ. ಅರಸೀಕೆರೆಯಲ್ಲಿ ಸುರಿದ ಮಳೆಗೆ ಬಸ್ ನಿಲ್ದಾಣ ಕೆರೆಯಂತೆ ಭಾಸವಾಯಿತು. ಪ್ರಯಾಣಿಕರು ಬಸ್ ಹತ್ತಲು ಹರಸಾಹಸಪಟ್ಟರು. ಚನ್ನರಾಯಪಟ್ಟಣ ತಾಲ್ಲೂಕಿನ ಮಲ್ಲಾಘಟ್ಟ ಕೆರೆ ತುಂಬಿ ಹರಿಯುತ್ತಿದ್ದು ಪ್ರವಾಸಿಗರ ತಾಣವಾಗಿ ಮಾರ್ಪಟ್ಟಿದೆ. ನಾಯಕ ಜಗ್ಗೇಶ್ ಅವರ ಮನ್ಮಥ ಸಿನಿಮಾ ಚಿತ್ರೀಕರಣವಾಗಿರುವ ಸ್ಥಳ ಇದಾಗಿದ್ದು ಕೆರೆ ಭರ್ತಿಯಾಗಿರುವ ಹಿನ್ನೆಲೆ ಸೊಬಗು ಹೆಚ್ಚಿದೆ. ಚನ್ನರಾಯಪಟ್ಟಣ, ತಿಪಟೂರು, ತುರುವೇಕೆರೆ, ಅಮ್ಮಸಂದ್ರ, ಹಾಗೂ ಬೆಳ್ಳೂರಿನಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಜಲಧಾರೆ ಕಣ್ತುಂಬಿಕೊಂಡರು.

### ಕುಸಿದ ಮನೆ ಛಾವಣಿ

ಬೇಲೂರು ತಾಲ್ಲೂಕು ಹಳೇಬೀಡು ಸಮೀಪದ ಬೂದಿಗುಂಡಿಯಲ್ಲಿ ವರುಣಾರ್ಭಟಕ್ಕೆ ಮನೆ ಛಾವಣಿ ಕುಸಿದು ಮಹಿಳೆಯೊಬ್ಬರ ಬದುಕು ಬೀದಿಗೆ ಬಂದಿದೆ. ನಿವಾಸಿ ರಾಜಮ್ಮ ಅವರ ಮನೆ ಛಾವಣಿ ಧರೆಗುರುಳಿದೆ. ಸೋಮವಾರ ಸುರಿದ ಭಾರೀ ಮಳೆಯಿಂದ ಅವಘಡ ಸಂಭವಿಸಿದ್ದು ಅದೃಷ್ಟವಶಾತ್ ಯಾವುದೇ ಹಾನಿ ಸಂಭವಿಸಿಲ್ಲ.

ಹಳೇಬೀಡಿನಲ್ಲಿ ಕಳೆದ ಮೂರು ದಿನಗಳಿಂದ ಪ್ರತಿದಿನ ಸಂಜೆ 5 ರಿಂದ ರಾತ್ರಿಪೂರ್ತಿ ಮಳೆ ಸುರಿಯುತ್ತಲೇ ಇದೆ. ದ್ವಾರಸಮುದ್ರ ಕೆರೆ ಕೋಡಿ ನೀರು ಐದು-ಆರು ತಿಂಗಳಿಂದ ನಿರಂತರವಾಗಿ ಬೂದಿಗುಂಡಿ ಕಾಲುವೆಯಲ್ಲಿ ಹೋಗುತ್ತಿದೆ. ಅದರಿಂದ ಸುತ್ತಲಿನ 74 ಮನೆಗಳು ಶೀತಪೀಡಿತವಾಗಿದ್ದು ವಾಸಕ್ಕೆ ತೊಂದರೆಯಾಗುತ್ತಿದೆ. ಶೀತದಿಂದ ಬಹುತೇಕರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಶೀತ, ಕೆಮ್ಮು, ತಲೆ ನೋವು ಸಮಸ್ಯೆಗಳಿಂದ ಬಹುತೇಕರು ಬಳಲುತ್ತಿದ್ದಾರೆ. ಗ್ರಾಮ ಪಂಚಾಯಿತಿ ಸದಸ್ಯ ಹೆಚ್.ಕೆ. ಶಿವಕುಮಾರ್ ಮಾತನಾಡಿ, ಬೂದಿಗುಂಡಿ ನಿವಾಸಿಗಳಿಗೆ ಈ



ಬಾರಿಯ ಮಳೆ ಶಾಪವಾಗಿ ಪರಿಣಮಿಸಿದೆ. ಮಕ್ಕಳು, ವೃದ್ಧರಿಗೆ ಶೀತ, ಜ್ವರ ಹಲವಾರು ತೊಂದರೆಗಳು ಉಲ್ಬಣಿಸಿವೆ. ಮಾಜಿ ಶಾಸಕ ಕೆ.ಎಸ್. ಲಿಂಗೇಶ್ ಅವರು ಹತ್ತಿರದ ಒಂಟೆಮಳಿ ಗುಡ್ಡದಲ್ಲಿ 6 ಎಕರೆ ಭೂಮಿಯಲ್ಲಿ ನಿವೇಶನಕ್ಕೆ ಮಂಜೂರಾತಿ ಕೊಡಿಸಿದ್ದರು. ಅದಕ್ಕೆ ಗ್ರಾಮ ಪಂಚಾಯಿತಿ ಸಹ ಸಹಮತಿ ನೀಡಿದೆ. ಪ್ರಸ್ತುತ ಶಾಸಕರು ಹಾಗು ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಒಂಟೆಮಳಿ ಗುಡ್ಡದ ನಿವೇಶನದಲ್ಲಿ ಮನೆ ನಿರ್ಮಿಸಿಕೊಡಬೇಕೆಂದು ಆಗ್ರಹಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಹೆಚ್.ಆರ್. ಮಧು ಮಾತನಾಡಿ, ಬೂದಿಗುಂಡಿ ಜನರು ಎದುರಿಸುತ್ತಿರುವ ಸಮಸ್ಯೆಯನ್ನು ಶಾಸಕರ ಗಮನಕ್ಕೆ ತರಲಾಗಿದೆ. ಮನೆ ನಿರ್ಮಾಣಕ್ಕೆ ಶೀಘ್ರ ಕ್ರಮ ಕೈಗೊಳ್ಳುವ ಭರವಸೆಯನ್ನು ಶಾಸಕರು ನೀಡಿದ್ದಾರೆಂದರು.

### ಸಕಲೇಶಪುರದಲ್ಲಿ ಧಾರಾಕಾರ ಮಳೆ

ಸೋಮವಾರ ರಾತ್ರಿ ಸಕಲೇಶಪುರದಲ್ಲಿ ಧಾರಾಕಾರ ಮಳೆಗೆ ಕಾಫಿ ಫಸಲು ನಾಶವಾಗಿದೆ. ಅರೇಬಿಕಾ ಕಾಫಿ ಕೊಯ್ಲು ಸಂದರ್ಭದಲ್ಲೇ ಮಳೆ ಸುರಿದಿದ್ದು ಆಘಾತ ತರಿಸಿದೆ. ಕಾಫಿ ಫಸಲನ್ನು ಕಣದಲ್ಲಿ ಹಾಕಿದ್ದು ನಿರಂತರ ಮಳೆಯಿಂದ ನೀರಿನಲ್ಲಿ ಹರಿದು ಹೋಗುವಂತಾಗಿದೆ. ಅದರಿಂದ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮಂಗಳವಾರ ಪೂರ್ತಿದಿನ ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗಿ ಚಳಿಯ ಅನುಭವ ನೀಡಿತು. ಸ್ವಲ್ಪವೂ ಬಿಸಿಲು ಕಾಣದ್ದರಿಂದ ಜನರು ಮನೆಯಿಂದ ಹೊರಬರಲು ಹಿಂದೇಟು ಹಾಕಿದರು. ಹಾಸನಾಂಬ ದರ್ಶನಕ್ಕೆ ಬಂದಿದ್ದ ಭಕ್ತರು ಚಳಿಗೆ ನಡುಗಿದರು.

### ಸೇತುವೆ ಕುಸಿತ ಸ್ಥಳಕ್ಕೆ ಶಾಸಕರ ಭೇಟಿ

ಭಾರೀ ಮಳೆಯಿಂದ ಪಾಳ್ಯಸಿಂಗೊಂಡನಹಳ್ಳಿ ಗ್ರಾಮ ಮಧ್ಯೆ ಹರಿಯುವ ಚಕ್ರತೀರ್ಥ ನದಿಯ ಕಿರು ಸೇತುವೆ ಕೊಚ್ಚಿ ಹೋಗಿದ್ದು ರಸ್ತೆ ಸಂಪರ್ಕ ಕಡಿತಗೊಂಡಿದೆ. ಪಾಳ್ಯ, ಅರಳುಕೊಪ್ಪಲು, ಸಿಂಗೊಂಡನಹಳ್ಳಿ, ಹಾಚಗೊಂಡಹಳ್ಳಿ, ಮಲ್ಲೇನಹಳ್ಳಿ, ಅಬ್ಬನ ಮತ್ತು ಚಿನ್ನಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಇದ್ದ ಕಿರು ಸೇತುವೆಯು ಸೋಮವಾರ ಸಂಜೆ ಸುರಿದ ಮಳೆಗೆ ಕೊಚ್ಚಿ ಹೋಗಿದೆ. ವಾಹನಗಳ ಸಂಚಾರಕ್ಕೆ



ಅಡ್ಡಿಯಾಗಿದ್ದು ಮಕ್ಕಳು ಶಾಲೆಗೆ ಹೋಗಲು ಹತ್ತಾರು ಕಿ.ಮೀ. ಸುತ್ತಬೇಕಿದೆ. ರಸ್ತೆ ಸಂಪರ್ಕ ಕಡಿತಗೊಂಡಿರುವ ಮಾಹಿತಿ ತಿಳಿದ ಶಾಸಕ ಸಿಮೆಂಟ್ ಮಂಜು



ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು. ಕಿರು ಸೇತುವೆ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ ಮಾತಾನಾಡಿದ ಶಾಸಕರು, ಪ್ರಸಕ್ತ ವರ್ಷದಲ್ಲಿ ಮಲೆನಾಡು ಭಾಗದಲ್ಲಿ ವಾಡಿಕಗಿಂತ ಹೆಚ್ಚು ಮಳೆಯಾಗಿದೆ. ಕ್ಷೇತ್ರದ ರಸ್ತೆ, ಸೇತುವೆಗಳು ಕೊಚ್ಚಿ ಹೋಗಿದ್ದು ಸಾಕಷ್ಟು ಹಾನಿಯಾಗಿದೆ. ಸರ್ಕಾರ ಕೂಡಲೇ ಹಾನಿಗೋಳಗಿರುವ ಮಲೆನಾಡು ಪ್ರದೇಶಕ್ಕೆ ವಿಶೇಷ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು. ನದಿ ಪಾತ್ರದಲ್ಲಿರುವ ಚಾನಲ್‌ಗಳು ಹುಳು ತುಂಬಿಕೊಂಡು ನೀರು ಚಾನಲ್ ಮೂಲಕ ಸರಾಗವಾಗಿ ಹರಿಯದೆ ಪೋಲಾಗುತ್ತದೆ. ಅದರಿಂದ ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಬೆಳೆ ನಾಶವಾಗಿದೆ. ಸರ್ಕಾರ ಕೂಡಲೇ ನಾಲೆಗಳ ದುರಸ್ತಿಗೆ ಕ್ರಮ ವಹಿಸಬೇಕೆಂದು ಆಗ್ರಹಿಸಿದರು.

ಉಪ ನದಿಗಳಿಂದ ಹರಿಯುವ ನದಿಗೆ ನಿರ್ಮಿಸಿರುವ ಕಿರು ಸೇತುವೆಯ ಪೈಪ್ ಗಳಲ್ಲಿ ಮರದ ರೆಂಬೆ ಕೊಂಬೆ, ಕಸ ಕಡ್ಡಿ ಶೇಖರಣೆಯಾಗಿ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದೆ ಇರುವುದನ್ನು ಅರಿತ ಶಾಸಕ ಸಿಮೆಂಟ್ ಮಂಜು ಅವರು ತಕ್ಷಣವೇ ಜೆಸಿಬಿ ಕರೆಸಿಕೊಂಡು ಪೈಪ್‌ನಲ್ಲಿ ಶೇಖರಣೆಯಾಗಿದ್ದ ಮರದ ದಿಂಬಿ ಹಾಗೂ ತ್ಯಾಜ್ಯವನ್ನು ಸ್ವಚ್ಛಗೊಳಿಸಿ ನೀರು ಹರಿಯುವಂತೆ ವ್ಯವಸ್ಥೆ ಮಾಡಿದರು.

# ಸಾರ್ವಜನಿಕ ದರ್ಶನಕ್ಕೆ ಇಂದು ಕಡೆಯ ದಿನ

## 20 ಕೋಟಿ ರೂ. ಆದಾಯ | ನಾಳೆ ಮಹೋತ್ಸವಕ್ಕೆ ತೆರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಕ್ತಿದೇವತೆ ಹಾಸನಾಂಬ ಸಾರ್ವಜನಿಕ ದರ್ಶನಕ್ಕೆ ಅ. 22ರ ಬುಧವಾರ ಕೊನೆಯ ದಿನವಾಗಿದ್ದು ಗುರುವಾರ ಒಂದೇ ಮಧ್ಯಾಹ್ನ ಶಾಸ್ತ್ರೋಕ್ತವಾಗಿ ದೇವಿಯ ಗರ್ಭಗುಡಿ ಬಾಗಿಲು ಮುಚ್ಚಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಸೋಮವಾರ 2 ಲಕ್ಷ ಜನರು ದರ್ಶನ ಪಡೆದಿದ್ದಾರೆ. ಪ್ರಸ್ತುತ ವರ್ಷ ಇಲ್ಲಿಯವರೆಗೆ 23 ಲಕ್ಷ ಜನರು ಜನರು ದರ್ಶನ ಪಡೆದಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಈ ವರ್ಷ 300/1000 ಟಿಕೆಟ್ ಸಾಲಿನಲ್ಲಿ 3,40,260 ಜನರು ದರ್ಶನ ಪಡೆದಿದ್ದಾರೆ. ಬುಧವಾರ ಬೆಳಿಗ್ಗೆ 5 ರಿಂದ ದರ್ಶನ ಆರಂಭವಾಗಿ ಸಂಜೆ 7 ಗಂಟೆವರೆಗೆ ನಿರಂತರವಾಗಿ ಮುಂದುವರಿಯುತ್ತದೆ.

ಸಾರ್ವಜನಿಕ ದರ್ಶನ ಸಂಜೆ 7 ಗಂಟೆಗೆ ಮುಗಿಯುತ್ತದೆ. ನಂತರ ಸಾರ್ವಜನಿಕ ದರ್ಶನ ಇರುವುದಿಲ್ಲ. ಬಾಗಿಲು ಮುಚ್ಚುವ ಗುರುವಾರ ಸಾರ್ವಜನಿಕರಿಗೆ ದರ್ಶನ ಇರುವುದಿಲ್ಲ ಎಂದು ಅವರು ಹೇಳಿದ್ದಾರೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಇದುವರೆಗೂ 23 ಲಕ್ಷಕ್ಕೂ ಅಧಿಕ ಭಕ್ತರು ಹಾಸನಾಂಬ ದರ್ಶನ ಪಡೆದಿದ್ದಾರೆ. 1000, 300 ರೂ. ಲಾಡು ಪ್ರಸಾದ ಮಾರಾಟದಿಂದ 20 ಕೋಟಿ ರೂ. ಆದಾಯ ಬಂದಿದೆ ಎಂದಿದ್ದಾರೆ.

ಇಂದು ಬೆಳಿಗ್ಗೆಯಿಂದ ಭಕ್ತರ ಸಂಖ್ಯೆ ಕಡಿಮೆ ಇತ್ತು. ಇಲ್ಲಿಯವರೆಗೂ 68 ಸಾವಿರಕ್ಕೂ ಹೆಚ್ಚು ಭಕ್ತರು ದೇವಿ ದರ್ಶನ ಪಡೆದಿದ್ದಾರೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರಿಂದ ಸೋಮವಾರವೇ ಪ್ರೋಟೋಕಾಲ್ ಬಂದ್ ಮಾಡಿದ್ದೇವೆ ಎಂದರು.

ಪ್ರೋಟೋಕಾಲ್ ಮುಗಿದ ಮೇಲೂ ಕೆಲವು ಗಣ್ಯರು ಸ್ವಾಮೀಜಿಗಳು ಬರುತ್ತಿದ್ದಾರೆ. ಅವರನ್ನು ಪಾಸ್, ಸಾವಿರ ರೂ. ಟಿಕೆಟ್ ಮೂಲಕ ಕರೆ ತಂದು ದೇವಿ ದರ್ಶನ ಮಾಡಿಸುತ್ತಿದ್ದೇವೆ ಎಂದರು.

ಬುಧವಾರ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಹಾಗೂ ಕೊಂಡೋತ್ಸವ, ರಥೋತ್ಸವ ಇರುತ್ತದೆ.

ಬುಧವಾರ ರಾತ್ರಿ 12 ಗಂಟೆಯಿಂದ ಗುರುವಾರ ಬೆಳಿಗ್ಗೆ 5 ಗಂಟೆವರೆಗೆ ದೇವಾಲಯದ ಸುತ್ತಲೂ ಇರುವವರಿಗೆ ಹಾಗೂ ಸಾರ್ವಜನಿಕರಿಗೆ ದರ್ಶನ ವ್ಯವಸ್ಥೆ ಕಲ್ಪಿಸಲಾಗಿದೆ.

ಗುರುವಾರ ಬೆಳಿಗ್ಗೆ 5 ಗಂಟೆಯಿಂದ ಸಾರ್ವಜನಿಕ ದರ್ಶನ ಇರುವುದಿಲ್ಲ ಎಂದು ಹೇಳಿದರು.

ಈ ಬಾರಿಯ ಜಾತ್ರಾ ಮಹೋತ್ಸವ ಯಶಸ್ವಿಯಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನದಲ್ಲಿ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ, ಕೆಳವರ್ಗದ ಕಾರ್ಮಿಕರು ದುಡಿದಿದ್ದಾರೆ. ಇದರಿಂದಾಗಿ ಉತ್ಸವ ಅದ್ಧೂರಿಯಾಗಿ ನಡೆದಿದೆ ಎಂದರು.



### ಚಾಮರಾಜನಗರ ಶಾಸಕರ ಅಸಮಾಧಾನ

ಮಂಗಳವಾರ ದೇವಿ ದರ್ಶನಕ್ಕೆ ಆಗಮಿಸಿದ ಚಾಮರಾಜನಗರ ಶಾಸಕ ಪುಟ್ಟರಂಗಶೆಟ್ಟಿ, 1000 ರೂ.ಟಿಕೆಟ್ ಪಡೆದು ಮಗ ಹಾಗೂ ಸ್ನೇಹಿತರ ಜೊತೆ ಬಂದರು.

ದೇವಾಸ್ಥಾನದ ಬಳಿ ಬರುತ್ತಿದ್ದಂತೆ ಬ್ಯಾರಿಕೇಡ್‌ನಿಂದ ಹೊರಗೆ ಬಂದು ಮುಖ್ಯದ್ವಾರದಿಂದ ತೆರಳಲು ಮುಂದಾದಾಗ ಗೇಟ್ ಬಳಿಯೇ ಬೇಲೂರು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಶಾಸಕರನ್ನು ತಡೆದರು.

ಗೇಟ್ ಮೂಲಕ ಬಿಡದೆ 1000 ರೂ. ಸರದಿ ಸಾಲಿನಲ್ಲಿ ಹೋಗುವಂತೆ ಮನವಿ ಮಾಡಿದರು.

ಅದೇ ವೇಳೆ ದೇವಾಲಯದ ಒಳಗೆ ಇದ್ದ ಸಂಸದ ಶ್ರೇಯಸ್‌ಪಟೇಲ್‌ಗೆ ಪುಟ್ಟರಂಗಶೆಟ್ಟಿ ಕರೆ ಮಾಡಿದರು. ಆದರೂ ಮುಖ್ಯದ್ವಾರದಲ್ಲಿ ಅಧಿಕಾರಿಗಳು ಬಿಡಲಿಲ್ಲ. ವಾಪಸ್ 1000 ರೂ.ಸಾಲಿನಲ್ಲಿ ಬಂದು ದೇವಿ ದರ್ಶನ ಪಡೆದರು.

# ಹುತಾತ್ಮ ಪೊಲೀಸರ ಸ್ಮರಣೆ ಪ್ರತಿಯೊಬ್ಬರ ಕರ್ತವ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೇಶದೊಳಗಿನ ಕಾನೂನು ಸುವ್ಯವಸ್ಥೆ ಪಾಲನೆ, ನಾಗರಿಕರ ಆಸ್ತಿಪಾಸ್ತಿ ರಕ್ಷಣೆ, ಅಪರಾಧ ತಡೆ ಹೀಗೆ ಹತ್ತು ಹಲವಾರು ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಪ್ರಾಣತ್ಯಾಗ ಮಾಡಿ ಹುತಾತ್ಮರಾದ ಪೊಲೀಸರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಮಂಗಳವಾರ ಏರ್ಪಡಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆಯಲ್ಲಿ ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಹೂ ಗುಚ್ಛ ಅರ್ಪಿಸಿ ಗೌರವ ಸಲ್ಲಿಸಿ ನಂತರ ನಡೆದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 1959 ರಲ್ಲಿ ಸಿಯಾಚಿನ್ ಗಡಿಯಲ್ಲಿ ಕರ್ತವ್ಯದಲ್ಲಿದ್ದ ಸಂದರ್ಭದಲ್ಲಿ ದಾಳಿಯಿಂದ ಮೃತಪಟ್ಟವರ ಸ್ಮರಣಾರ್ಥವಾಗಿ ಪ್ರತಿ ವರ್ಷ ಅ. 21 ರಂದು ಪೊಲೀಸ್ ಹುತಾತ್ಮರ ದಿನ ಆಚರಿಸಲಾಗುತ್ತದೆ ಎಂದರು.

ಹುತಾತ್ಮ ಪೊಲೀಸ್‌ಅಧಿಕಾರಿ ಮತ್ತು ಸಿಬ್ಬಂದಿ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯನ್ನು ಸಹಿಸಿಕೊಳ್ಳುವ ಶಕ್ತಿಯನ್ನು ನೀಡಲಿ ಎಂದು ತಿಳಿಸಿದರಲ್ಲದೆ, ಬಂದೋಬಸ್ತ್ ಮತ್ತಿತರ ಕರ್ತವ್ಯದ ಮೇಲೆ 24X7 ಸಮಯ ಕರ್ತವ್ಯ ನಿರ್ವಹಿಸುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ತಮ್ಮ ಕುಟುಂಬ ಹಾಗೂ ವೈಯಕ್ತಿಕವಾಗಿಯೂ ಗಮನಹರಿಸಲು ಸಾಧ್ಯವಾಗುವುದಿಲ್ಲ, ಇವರ ಸೇವಾ ಭದ್ರತೆ ಬಗ್ಗೆ ಹೆಚ್ಚಿನ ಗಮನ ಹರಿಸುವ ಅಗತ್ಯತೆ ಇದೆ ಎಂದರು.

ದೇಶ, ಸಮಾಜಕ್ಕಾಗಿಬಲಿದಾನ ಮಾಡಿದ



ಪೊಲೀಸ್‌ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕುಟುಂಬದವರ ಬೆಂಬಲ ಇಲ್ಲದಿದ್ದರೆತಮ್ಮ ಕರ್ತವ್ಯ ನಿಭಾಯಿಸಲು ಸಾಧ್ಯವಾಗುತ್ತಿರಲಿಲ್ಲ ಆ ಕಾರಣಕ್ಕಾಗಿ ಅವರ ಕುಟುಂಬ ವರ್ಗದವರಿಗೂ ದೊಡ್ಡ ನಮನ ಸಲ್ಲಿಸುತ್ತೇನೆ ಎಂದರು. ಸರ್ಕಾರಿ ಸೇವೆ ಬಗ್ಗೆ ಅಭಿಮಾನ ನಿಷ್ಠೆ ಇರಲೇಬೇಕು. ಅದನ್ನಿಟ್ಟುಕೊಂಡು ಕುಟುಂಬದ ವೈಯಕ್ತಿಕ ಭಾವನೆಗಳಿಗೂ ಬೆಲೆ ಕೊಡಬೇಕು. ಕರ್ತವ್ಯದಲ್ಲಿದ್ದು ಅದನ್ನು ಮರೆಯಬೇಡಿ, ಸಮಾಜಕ್ಕೆ ಉತ್ತಮ ಸೇವೆಯನ್ನು ನೀಡಲು ತಮಗೆ ಹೆಚ್ಚಿನ ಶಕ್ತಿ ದೊರೆಯಲಿ ಎಂದು ಹಾರೈಸಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ದೇಶ, ಸಮಾಜದ ಸ್ವಾಸ್ಥ್ಯ ಕಾಪಾಡುವುದಕ್ಕಾಗಿ ದುಡಿಯುವ ಪೊಲೀಸ್ ಇಲಾಖೆಯ ಅಮೋಘ ಸೇವೆಯನ್ನು ಸ್ಮರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು. ಸಮಾಜದ ನೆಮ್ಮದಿ ಕಾಪಾಡುವ ಹೊಣೆ ಹೊತ್ತು ಕರ್ತವ್ಯ ನಿರ್ವಹಿಸುವ ಪೊಲೀಸ್ ಇಲಾಖೆಗೆ ಸಮಾಜ ಎಷ್ಟರ ಮಟ್ಟಿಗೆ ಗೌರವ ನೀಡುತ್ತದೆ ಎಂದು ನೋಡಬೇಕು. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿ ಹೇಳಬೇಕು ಎಂದರಲ್ಲದೆ, ಇದಕ್ಕೆ ಉತ್ತಮ ಉದಾಹರಣೆ ಹಾಸನಾಂಬ ಜಾತ್ರಾ ಮಹೋತ್ಸವದಲ್ಲಿ ಜನಸಂದಣಿ ನಿಯಂತ್ರಣ ಮಾಡುವುದನ್ನು ಕಣ್ಣಾರೆ ನೋಡಿದ್ದೇವೆ. ಇವರಿಗೆ ನೈತಿಕ ಬೆಂಬಲ ನೀಡಬೇಕು ಎಂದರು.

ಕರ್ತವ್ಯ ಪಾಲನೆಯಲ್ಲಿ ಸದಾ ನಿರತರಾಗಿ ನಮ್ಮೆಲ್ಲರ ಸುರಕ್ಷತೆಗೆ ಶ್ರಮಿಸುವ ದೇಶದ ಭದ್ರತೆಗೆ ಹೋರಾಡಿ ಪ್ರಾಣತ್ಯಾಗ ಮಾಡಿ ಹುತಾತ್ಮರಾದ ಶೌರ್ಯ, ಸಮರ್ಪಣೆ, ತ್ಯಾಗವನ್ನು ಸ್ಮರಿಸಿ ಗೌರವಿಸುವುದು ನಮ್ಮೆಲರಕರ್ತವ್ಯ, ಅಂತಹ ಮಹಾನುಭಾವರನ್ನೆಲ್ಲ ಸ್ಮರಿಸುತ್ತಾ ಅವರ ಕುಟುಂಬಸ್ಥರಿಗೆ ವಂದಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಮಾತನಾಡಿ, 2024 ರ ಸೆಪ್ಟೆಂಬರ್ ತಿಂಗಳಿನಿಂದ 2025 ರಆಗಸ್ಟ್ 31 ವರೆಗೆ ದೇಶದಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ 191 ಮಂದಿ ಪ್ರಾಣ ತ್ಯಾಗ ಮಾಡಿದ್ದಾರೆ ಎಂದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಮತ್ತಿತರ ಅಧಿಕಾರಿಗಳು ಇದ್ದರು.

# ಹಾಸನಾಂಬ ಜಾತ್ರೆ: ಆಡಳಿತ ಯಂತ್ರ ನಿಷ್ಕ್ರಿಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಸಾಲು ಸಾಲು ಸರ್ಕಾರಿ ರಜೆ ಹಾಗೂ ಕಂದಾಯ ಇಲಾಖೆಯ ಹೆಚ್ಚಿನ ಸಿಬ್ಬಂದಿಯನ್ನು ಹಾಸನಾಂಬ ಜಾತ್ರಾ ಮಹೋತ್ಸವ ಉಸ್ತುವಾರಿಗೆ ನೇಮಿಸಿರುವುದರಿಂದ ಸಾರ್ವಜನಿಕರಿಗೆ ಕಂದಾಯ ಇಲಾಖೆಯ ಕೆಲಸಗಳು ಆಗದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ದಸರಾ ರಜೆ ಮುಗಿದು ಇದೀಗ ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಮತ್ತೆ ಭಾನುವಾರ, ಸೋಮವಾರ, ಬುಧವಾರ ಸರ್ಕಾರಿ ರಜೆಯಿತ್ತು. ಮಂಗಳವಾರ ಮಾತ್ರ ಕಚೇರಿಯಿದ್ದು ಬಹುತೇಕ ಕಂದಾಯ ಇಲಾಖೆಯ ಸಿಬ್ಬಂದಿ ಕರ್ತವ್ಯಕ್ಕೆ ಮಂಗಳವಾರ ರಜೆ ಹಾಕಿದ್ದರು. ಇನ್ನು ಹಲವು ಸಿಬ್ಬಂದಿ ಹಾಸನಾಂಬ ದೇವಸ್ಥಾನದ ಮಹೋತ್ಸವಕ್ಕೆ ತೆರಳಿರುವುದರಿಂದ ಸಾರ್ವಜನಿಕರಿಗೆ ಕಂದಾಯ ಇಲಾಖೆಯ ಸೇವೆಗಳು ಬಹಳ ವಿಳಂಬವಾಗಿ ದೊರಕುತ್ತಿದೆ. ತುರ್ತು ಅಗತ್ಯವಿರುವ ಆದಾಯ ಪ್ರಮಾಣ ಪತ್ರ, ವಾಸ ದೃಢೀಕರಣ ಪತ್ರ, ರೇಷನ್ ಕಾರ್ಡ್ ತಿದ್ದುಪಡಿಯಂತಹ ಸಣ್ಣಪುಟ್ಟ ಸೇವೆಗಳು, ವಿವಿಧ ದಾಖಲಾತಿಗಳನ್ನು ಪಡೆಯುವುದಕ್ಕೆ ಸಾರ್ವನಿಕರಿಗೆ ನಿಗದಿತ ಸಮಯಕ್ಕೆ ಆಗದೆ ಸರ್ಕಾರಕ್ಕೆ ಹಿಡಿಶಾಪ ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಗುರುವಾರದಿಂದ ಸರ್ಕಾರಿ ಕಚೇರಿಗಳು ಪುನರ್ ಆರಂಭವಾಗಲಿದ್ದು ಮತ್ತೆ ಕೇವಲ 2 ದಿನ ಮಾತ್ರ ಕಾರ್ಯನಿರ್ವಹಿಸಲಿದ್ದು ಶನಿವಾರ ಪುನ: ನಾಲ್ಕನೇ ಶನಿವಾರದ ಹಿನ್ನೆಲೆ ಹಾಗೂ ಭಾನುವಾರ ಎಂದಿನಂತೆ ರಜೆ ಇರುವುದರಿಂದ ಸಾರ್ವಜನಿಕರಿಗೆ ನಿಗದಿತ ಸಮಯದಲ್ಲಿ ಸೇವೆ ದೊರಕುವುದು ಅನುಮಾನವಾಗಿದೆ. ಕಂದಾಯ ಇಲಾಖೆ ಮಾತ್ರವಲ್ಲದೆ ಸರ್ವೆ ಇಲಾಖೆ, ಕ್ಷೇತ್ರ ಶಿಕ್ಷಣ ಇಲಾಖೆ, ತಾ.ಪಂ, ಪುರಸಭೆಗಳಲ್ಲೂ ಸಹ ಸಾಲು ಸಾಲು ರಜೆಗಳಿಂದ ಸಾರ್ವಜನಿಕರ ಕೆಲಸ ಕಾರ್ಯಗಳು ನಿಗದಿತ ವೇಳೆಗೆ ಆಗದೆ ಸಾರ್ವಜನಿಕರು ಪರದಾಡುವಂತಾಗಿದೆ.

# ಜಿಲ್ಲಾದ್ಯಂತ ಬೆಳಕಿನ ಹಬ್ಬಕ್ಕೆ ಸಾಮಗ್ರಿ ಖರೀದಿ ಭರಾಟೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕತ್ತಲಿನಿಂದ ಬೆಳಕಿನೆಡೆ ಕರೆದೊಯ್ಯುವ ದೀಪಾವಳಿ ಹಬ್ಬ ಆಚರಿಸಲು ನಗರ ಸೇರಿದಂತೆ ಜಿಲ್ಲಾದ್ಯಂತ ಸಾರ್ವಜನಿಕರು ಸಿದ್ಧತೆ ನಡೆಸಿದ್ದಾರೆ.

ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಮನೆಯಿಂದ ಹೊರಬರಲು ಹಿಂದೇಟು ಹಾಕುತ್ತಿರುವ ನಡುವೆಯೂ ವರುಣ ಬಿಡುವು ನೀಡಿದ ಸಮಯದಲ್ಲಿ ಮಾರುಕಟ್ಟೆಗೆ ಜನರು ಲಗ್ಗೆಯಿಡುತ್ತಿದ್ದಾರೆ. ಬಟ್ಟೆ ಅಂಗಡಿ, ವಾಹನ ಶೋ ರೂಂ, ಆಭರಣ ಮಳಿಗೆ, ಉಡುಗೊರೆ ಅಂಗಡಿಗಳಲ್ಲಿ ಜನದಟ್ಟಣೆ ಹೆಚ್ಚಾಗಿ ಕಂಡುಬಂತು.



ವ್ಯಾಪಾರಿಗಳು ಅಂಗಡಿ ಮುಂಗಟ್ಟು ಸ್ವಚ್ಛಗೊಳಿಸಿ ಅಲಂಕಾರಗೊಳಿಸಿದ್ದಾರೆ. ಕೆಲವು ಅಂಗಡಿ-ಮಳಿಗೆಗಳಲ್ಲಿ ಪೂಜೆ ಸಲ್ಲಿಸಲಾಗಿದೆ. ಗ್ರಾಹಕರನ್ನು ಸೆಳೆಯಲು ವರ್ತಕರು ವಿವಿಧ ರೀತಿಯ ಆಫರ್ ಗಳನ್ನು ಘೋಷಿಸಿದ್ದಾರೆ. ರಸ್ತೆಗಳಲ್ಲಿ ಸಂಜೆ ವೇಳೆ ಸಂಚಾರ ದಟ್ಟಣೆ ಉಂಟಾಗುತ್ತಿದೆ. ನಗರದ ಕಟ್ಟಿನಕೆರೆ ಮಾರುಕಟ್ಟೆಯಲ್ಲಿ ಜನರು ಓಡಾಡುವುದು ಕಷ್ಟ ಸಾಧ್ಯವಾಗಿದೆ.

ದೀಪಾವಳಿ ಪ್ರತಿನಿಧಿಸುವ ಮಣ್ಣಿನ ಹಣತೆಗಳ ಮಾರಾಟಕ್ಕಾಗಿ ನಗರದಲ್ಲಿ ರಸ್ತೆ ಬದಿ ಮಳಿಗೆಗಳು ಸಿದ್ಧವಾಗಿವೆ. ಪುಟ್ಟ ಸಾಂಪ್ರದಾಯಿಕ ತರಹೇವಾರಿ ಬಣ್ಣ, ವಿನ್ಯಾಸದ ದೀಪಗಳು ಆಕರ್ಷಿಸುತ್ತಿವೆ. ಮನೆಗಳು, ಅಂಗಡಿಗಳ ಎದುರು ಅಳವಡಿಸಲಾಗುವ ಆಕಾಶ ಬುಟ್ಟಿಗಳು ಎಲ್ಲೆಡೆ ರಾರಾಜಿಸುತ್ತಿವೆ. ಬಣ್ಣ ಬಣ್ಣದ ರಂಗೋಲಿ, ಅಲಂಕಾರಿಕ ವಸ್ತುಗಳು, ಪಟಾಕಿಗಳು ಸೇರಿದಂತೆ ಹಬ್ಬಕ್ಕಾಗಿ ಮಾರುಕಟ್ಟೆಯಲ್ಲಿ ಶೃಂಗಾರಗೊಂಡಿದೆ.

ಹಬ್ಬದ ಹಿನ್ನೆಲೆ ಹೂವು ಹಣ್ಣು ಖರೀದಿ ಜೋರಾಗಿದೆ. ನಗರದ ಕಟ್ಟಿನಕೆರೆ ಮಾರುಕಟ್ಟೆ, ಮಹಾವೀರ ವೃತ್ತ, ಡೇರಿ ವೃತ್ತ ಸೇರಿ ವಿವಿಧೆಡೆ ವ್ಯಾಪಾರ ಜೋರಾಗಿ ನಡೆಯಿತು. ರಸ್ತೆ ಬದಿಯಲ್ಲಿ ಹೂವು-ಹಣ್ಣು, ಬಾಳೆ ಕಂದು, ಮಾವಿನ ಎಲೆ ಮಾರಾಟ ಮಾಡಲಾಗುತ್ತಿದೆ. ಸೇವಂತಿಗೆ ಒಂದು ಮಾರಿಗೆ 50 ರೂ. ನಂತೆ ಮಾರಾಟ ಮಾಡಲಾಯಿತು. ಚೆಂಡು ಹೂ ಒಂದು ಮಾರಿಗೆ 70 ರೂ. ಹಾಗು ಗುಡ್ಡೆ ಲೆಕ್ಕದಲ್ಲಿ ಮಾರಾಟ ಮಾಡಲಾಗುತ್ತಿದೆ. ಬಾಳೆ ಕಂದು ಜೋಡಿ 40 ರೂ., ಸೇಬು ಕೆ.ಜಿ.ಗೆ 150 ರೂ., ದಾಳಿಂಬೆ 100 ರೂ. ಮೂಸಂಬಿ ಕೆ.ಜಿ. 50 ರೂ., ಬಾಳೆ ಹಣ್ಣು ಕೆ.ಜಿ. 80 ರೂ. ನಂತೆ ದೊರೆಯಿತು. ಮಾರುಕಟ್ಟೆಯಲ್ಲಿ ಸಗಣಿಯೂ ಮಾರಾಟಕ್ಕೆ ಲಭ್ಯವಿತ್ತು. ಪ್ರತಿ ಉಂಡೆಗೆ 10 ರೂ.ನಂತೆ ಸಗಣಿಯನ್ನು ಮಹಿಳೆಯರು ಮಾರಾಟ ಮಾಡಿದರು.

# ಇಂದಿರಾ ಗಾಂಧಿ ಸೋತು ಸುಣ್ಣವಾದರು ಪ್ರಿಯಾಂಕ್ ಖರ್ಗೆ ಯಾವ ಲೆಕ್ಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಆರ್‌ಎಸ್‌ಎಸ್ ನಿಷೇಧಿಸಿದ ಇಂದಿರಾ ಗಾಂಧಿಯವರೇ ಚುನಾವಣೆಯಲ್ಲಿ ಸೋತು ಸುಣ್ಣವಾದರು ಇನ್ನು ಸಚಿವ ಪ್ರಿಯಾಂಕ್ ಖರ್ಗೆ ಯಾವ ಲೆಕ್ಕವೆಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹರಿಹಾಯ್ದರು.



ಹಾಸನಾಂಬ ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಜವಾಹರಲಾಲ್ ನೆಹರು ಅವರಿಂದಲೇ ಆರ್‌ಎಸ್‌ಎಸ್ ನಿಷೇಧಿಸಲು ಸಾಧ್ಯವಾಗಿಲ್ಲ. ಆರ್‌ಎಸ್‌ಎಸ್ ವಿರುದ್ಧ ಮಾತನಾಡಿದ ಕೆಲವರು ತೀರಿ ಹೋದರು ಮತ್ತೆ ಕೆಲವರು ನಾಶವಾದರು. ಈಗ ಅದರ ಕುಡಿ ಏನೇನೋ ಹೇಳುತ್ತಿದೆ. ಈ ವಿಷಯದಲ್ಲಿ ವಿಚಿತ್ರ ರಾಜಕಾರಣ ಬಿಟ್ಟರೆ ಬೇರೆ ಏನೂ ಇಲ್ಲ ಎಂದರು.

ಆರ್‌ಎಸ್‌ಎಸ್ ವಿರುದ್ಧವಾಗಿ ಮಾತನಾಡಿದರೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿಗೆ ಮುಂದೆ ಹಿರೋ ಆಗುತ್ತೇನೆಂದು ಭಾವಿಸಿ ಸಮಾಜದಲ್ಲಿ ವಿಲನ್ ಆಗುತ್ತಿದ್ದಾರೆ. ಸಚಿವ ಸಂಪುಟ ಪುನರ್ ರಚನೆಯಾದರೆ ಮಂತ್ರಿ ಸ್ಥಾನ ಉಳಿಸಿಕೊಳ್ಳುವ ಪ್ರಯತ್ನವಾಗಿ ಹೀಗೆಲ್ಲ ಮಾತನಾಡುತ್ತಿದ್ದಾರೆ. ಈ ಪ್ರಯತ್ನದಿಂದ ಸರ್ಕಾರವೇ ಉಳಿಯುವುದಿಲ್ಲ. ಆರ್ ಎಸ್‌ಎಸ್ ಮುಟ್ಟಿದವರು ನಾಶವಾಗಿ ಹೋಗಿದ್ದಾರೆ ಎಂದರು.

ಹಿಂದು ಧರ್ಮ ಉಳಿಸುವ ಕೆಲಸವನ್ನು ಆರ್‌ಎಸ್‌ಎಸ್ ಮಾಡುತ್ತಿದೆ. ಇಡೀ ಪ್ರಪಂಚದಲ್ಲಿ ಭಾರತೀಯ ಸಂಸ್ಕೃತಿ ಉನ್ನತ ಸ್ಥಾನಕ್ಕೇರಿದೆ. ಆರ್ ಎಸ್‌ಎಸ್ ಯಾರನ್ನೂ ಮತಾಂತರ ಮಾಡಿಲ್ಲ. ಬಿ.ಕೆ.ಹರಿಪ್ರಸಾದ್ ದೊಡ್ಡ ನಾಯಕರಾಗಲು ಹೊರಟಿದ್ದಾರೆ. ಸಂಘವನ್ನು ಟೀಕಿಸಿದರೆ ಬಹಳ ಗೌರವ ಬರುತ್ತೆ ಅಂದುಕೊಂಡಿದ್ದಾರೆ. ಆರ್‌ಎಸ್ ಎಸ್‌ಗೆ ಉಗುಳಿದರೆ ತಮ್ಮ ಮೈಮೇಲೆ ಬೀಳುತ್ತದೆ ಎನ್ನುವುದು ಗೊತ್ತಿಲ್ಲ. ಆರ್ ಎಸ್‌ಎಸ್ ವಿರೋಧಿಸುವವರ ಗುಂಪಿನಲ್ಲಿ ಪ್ರಿಯಾಂಕ್ ಖರ್ಗೆ ಬಿಟ್ಟರೆ ಬೇರೆ ಒಬ್ಬ ಮಂತ್ರಿಯೂ ಇಲ್ಲ. ಚಿತ್ತಾಪುರದಲ್ಲಿ ಪಥಸಂಚಲನ ನಡೆಸಲು ಹೈಕೋರ್ಟ್ ಸಮ್ಮತಿ ಸೂಚಿಸಿದ್ದು ನವೆಂಬರ್‌ನಲ್ಲಿ ನಡೆಯಲಿದೆಯೆಂದರು.

ವಿ.ಎಸ್. ಉಗ್ರಪ್ಪ ಅವರಿಗೆ ವಕೀಲರಾಗಿ ಏನು ಮಾಡಬೇಕೆಂಬುದು ಗೊತ್ತಿಲ್ಲ. ಆರ್‌ಎಸ್‌ಎಸ್ ಅಡಿಯಲ್ಲಿ ನೂರಾರು ಸಂಘ ಸಂಸ್ಥೆಗಳಿವೆ. ಎಲ್ಲವೂ ಸಂವಿಧಾನದಡಿ ನೋಂದಣಿಯಾಗಿ ಸರ್ಕಾರಕ್ಕೆ ಲೆಕ್ಕ ಕೊಡುತ್ತವೆ. ಅಷ್ಟು ಸಣ್ಣ ತಿಳವಳಿಕೆ ಇಲ್ಲದವರಿಗೆ ಪ್ರತಿಕ್ರಿಯೆ ನೀಡುವುದು ಬೇಡ. ರಾಷ್ಟ್ರೀಯ ಸ್ವಯಂ ಸೇವಕನ್ನು ಟೀಕಿಸಿದರೆ ಪ್ರಚಾರದಲ್ಲಿರುತ್ತೇವೆಂಬ ನಂಬಿಕೆಯಲ್ಲಿ ಕೆಲವರು ಹೀಗೆ ಮಾತನಾಡುತ್ತಿದ್ದಾರೆ. ನಾಥೂರಾಮ್ ಗೋಡ್ಸೆಗೂ ಆರ್‌ಎಸ್ ಎಸ್‌ಗೂ ಸಂಬಂಧವಿಲ್ಲವೆಂಬುದನ್ನು ಸುಪ್ರೀಂ ಕೋರ್ಟ್ ಹೇಳಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಅಚ್ಚುಕಟ್ಟು ವ್ಯವಸ್ಥೆ ಮುಂದುವರಿಯಲಿ

ಶಿಷ್ಟಾಚಾರದಂತೆ ಕುಟುಂಬ ಸಮೇತರಾಗಿ ಬಂದಿದ್ದ ಕೆ.ಎಸ್. ಈಶ್ವರಪ್ಪ ಅವರು ಹಾಸನಾಂಬ ಹಾಗು ಸಿದ್ದೇಶ್ವರಸ್ವಾಮಿ ದರ್ಶನ ಪಡೆದು ಜಿಲ್ಲಾಡಳಿತದ ವ್ಯವಸ್ಥೆಗೆ ಮೆಚ್ಚುಗೆ ಸೂಚಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಜಿಲ್ಲಾಡಳಿತ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ. ಮುಂದೆಯೂ ಈ ವ್ಯವಸ್ಥೆಯನ್ನೇ ಮುಂದುವರಿಸಬೇಕು. ಪ್ರತಿವರ್ಷ ಹಾಸನಾಂಬ ದರ್ಶನ ಪಡೆಯುತ್ತೇನೆ. ತಾಯಿ ಎಲ್ಲರಿಗೂ ಒಳಿತು ಮಾಡಲೆಂದು ಪ್ರಾರ್ಥಿಸಿದ್ದೇನೆಂದರು.

# ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಿಗೆ ಅಭಿನಂದನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ನಗರದ ಇಂಜಿನಿಯರಿಂಗ್ ಭವನದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಆಯ್ಕೆಯಾದ ರಾಜ್ಯ ಉಪಾಧ್ಯಕ್ಷ ಕೆ.ಎಂ. ಶ್ರೀನಿವಾಸ್ ಮತ್ತು ತಂಡಕ್ಕೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಸರ್ಕಾರಿ ಹಾಗು ಅರೆ ಸರ್ಕಾರಿ, ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಹಾಗು ಜಿಲ್ಲಾ ಸರ್ಕಾರಿ ನೌಕರರ ಕೋ-ಆಪರೇಟಿವ್ ಸೊಸೈಟಿ, ವಿವಿಧ ಸಂಘಟನೆಗಳು ಮತ್ತು ಎಲ್ಲಾ ಸರ್ಕಾರಿ ಇಲಾಖೆಗಳ ನೌಕರರ ಸಂಘಗಳಿಂದ ಆಯೋಜಿಸಿದ್ದ ಸಮಾರಂಭವನ್ನು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಉದ್ಘಾಟಿಸಿದರು.

ನಂತರ ಮಾತನಾಡಿದ ಸ್ವಾಮೀಜಿ, ಶ್ರೀನಿವಾಸ್ ಅವರು ಸರ್ಕಾರಿ ನೌಕರರ ಸಂಘಟನೆಯಲ್ಲಿ ಸಕ್ರಿಯರಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಮೂಲಕ ನೌಕರರಿಗೆ ಹಲವು ಸೌಲಭ್ಯ ಕಲ್ಪಿಸಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆಂದರು.



ಎಲ್ಲಾ ನೌಕರರ, ಸಂಘಟನೆಗಳ ಸಹಕಾರದಿಂದ ಜಿಲ್ಲಾಧ್ಯಕ್ಷರಾಗಿ ಸಾಕಷ್ಟು ಉತ್ತಮ ಕೆಲಸ ಮಾಡಿದ್ದಾರೆ. ಜೊತೆಗೆ ರಾಜ್ಯ ಸಂಘವು ಅವರಿಗೆ ರಾಜ್ಯ ಉಪಾಧ್ಯಕ್ಷ ಸ್ಥಾನ ನೀಡಿದ್ದು ಸಮರ್ಥವಾಗಿ ನಿಭಾಯಿಸುತ್ತಾರೆ ಎಂದು ಹೇಳಿದರು. ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ.ಎನ್.ಪರಮೇಶ್ ಅವರು ಮಾತನಾಡಿ, ಶ್ರೀನಿವಾಸ್ ಅವರನ್ನು ಸಂಘದ ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ಅದೇ ರೀತಿ ಟಿ.ರಾಜು ಮತ್ತು ವಿಶ್ವನಾಥ್ ಅವರನ್ನು ರಾಜ್ಯ ಸಂಘಟನಾ ಕಾರ್ಯದರ್ಶಿಯನ್ನಾಗಿ. ಎಸ್. ಮಧು ಅವರನ್ನು ರಾಜ್ಯ ಸಾಂಸ್ಕೃತಿಕ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿರುವುದು ಸಂಘಟನೆಗೆ ಬಲ ತುಂಬಿದೆ ಎಂದು ತಿಳಿಸಿದರು.

ರಾಜ್ಯ ಉಪಾಧ್ಯಕ್ಷ ಕೆ.ಎಂ. ಶ್ರೀನಿವಾಸ್ ಮಾತನಾಡಿ, ಹಲವು ವರ್ಷಗಳಿಂದ ನೌಕರರ ಮತ್ತು ಇನ್ನಿತರ ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ. ನಾನು ಜಿಲ್ಲಾಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಕೆಲಸ ಮಾಡಿದ್ದೇನೆ. ಈಗ ಜವಾಬ್ದಾರಿ ಹೆಚ್ಚಿದ್ದು ಎಲ್ಲರ ವಿಶ್ವಾಸದೊಂದಿಗೆ ನಿಭಾಯಿಸುತ್ತೇನೆ ಎಂದರು.

ಪ್ರೌಢಶಾಲಾ ಸಹಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜು, ಕಂದಾಯ ಇಲಾಖೆ ನೌಕರರ ಸಂಘದ ಅಧ್ಯಕ್ಷ ಚಂದ್ರೇಗೌಡ, ತಾಲ್ಲೂಕು ನೌಕರರ ಸಂಘದ ಅಧ್ಯಕ್ಷರಾದ ವರದರಾಜ್, ಪೃಥ್ವಿ ಇತರರಿದ್ದರು.

# 25 ಗ್ರಾಂ ತೂಕದ ಚಿನ್ನದ ಸರ ಎಗರಿಸಿದ ಅಪರಿಚಿತ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಅರಸೀಕೆರೆ: ಕುತ್ತಿಗೆ ಬಳಿ ಹುಳು ಕುಳಿತಿದೆಯೆಂದು ಕೈ ಹಾಕಿದ ಅನಾಮಿಕ ಮಹಿಳೆಗೆ ಗೊತ್ತಿಲ್ಲದಂತೆ 25 ಗ್ರಾಂ ತೂಕದ ಚಿನ್ನದ ಸರ ಎಗರಿಸಿರುವ ಘಟನೆ ತಾಲ್ಲೂಕಿನ ಕಾಮೇನಹಳ್ಳಿ ತಾಂಡ್ಯದ ಕಟ್ಟೆ ಬಳಿ ನಡೆದಿದೆ.

ಗ್ರಾಮದ ಹೆಚ್.ಎಸ್. ನಿರ್ಮಲ ಸರ ಕಳೆದುಕೊಂಡವರು. ಅ. 18ರಂದು ತಮ್ಮ ಜಮೀನಿಗೆ ಹೋಗುತ್ತಿದ್ದಾಗ ಎದುರಾದ ಅಪರಿಚಿತ ಸಖರಾಯಪಟ್ಟಣದ ಕಡೆಗೆ ಹೋಗುವ ದಾರಿ ಕೇಳಿದ್ದಾನೆ. ಆಗ ನಿರ್ಮಲ ಅವರು ರಸ್ತೆ ತೋರಿಸಿದ್ದಾರೆ. ಮುಂದುವರಿದ ಆತ ನಿಮ್ಮ ಕುತ್ತಿಗೆ ಬಳಿ ಹುಳು ಕುಳಿತಿದೆ ನೋಡಿ ಎಂದು ಅದನ್ನು ತೆಗೆಯುವಂತೆ ನಾಟಕವಾಡಿ ಚಿನ್ನದ ಸರ ಎಗರಿಸಿದ್ದಾನೆ. ಸ್ವಲ್ಪ ದೂರ ಹೋದ ಬಳಿಕ ಕೊರಳಲ್ಲಿ ಸರ ಇಲ್ಲದಿರುವುದು ಗೊತ್ತಾಗಿದೆ. ಅವರು ಜೋರಾಗಿ ಕಿರುಚಿದಾಗ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಪುತ್ರ ಸಂಗಮೇಶ ಮತ್ತು ಪಕ್ಕದ ಜಮೀನಿನ ಶಿವಣ್ಣ ಎಂಬುವವರು ದೌಡಾಯಿಸಿ ಅಪರಿಚಿತ ಹೋದ ಮಾರ್ಗದಲ್ಲಿ ಹುಡುಕಾಡಿದರೂ ಸಿಕ್ಕಿಲ್ಲ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪಟಾಕಿ ವ್ಯಾಪಾರಿಗಳಿಗೆ ನೋಟಿಸ್: ಬೇಸರ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಸಕಲೇಶಪುರ: ಪಟ್ಟಣದ ಹಳೇ ರಾಷ್ಟ್ರೀಯ ಹೆದ್ದಾರಿ 75ರ ಹೇಮಾವತಿ ಪ್ರತಿಮೆ ಸಮೀಪ ಪಟಾಕಿ ಅಂಗಡಿಗಳನ್ನು ತೆರೆಯಲು ಅವಕಾಶ ನೀಡಿದ ತಾಲ್ಲೂಕು ಆಡಳಿತ ಹಬ್ಬದ ಮುನ್ನಾ ದಿನ ವಿದ್ಯುತ್ ಕಂಬಗಳನ್ನು ಹಾಕಬಾರದೆಂದು ನೋಟಿಸ್ ಜಾರಿ ಮಾಡಿದ್ದು ವ್ಯಾಪಾರಿಗಳು ಬೇಸರ ಹೊರಹಾಕಿದ್ದಾರೆ.




ಪಟ್ಟಣದಲ್ಲಿ ಈ ಬಾರಿ ವ್ಯಾಪಕ ಮಳೆ ಸುರಿಯುತ್ತಿದ್ದು ಹೀಗಾಗಿ ಹಬ್ಬಕ್ಕೆ ಕೇವಲ 5 ದಿನ ಇರುವ ನಿಟ್ಟಿನಲ್ಲಿ ಪಟಾಕಿ ಅಂಗಡಿಗಳ ಮಾಲೀಕರು ತಾತ್ಕಾಲಿಕವಾಗಿ ಹಳೇ ರಾಷ್ಟ್ರೀಯ ಹೆದ್ದಾರಿ 75ರ ಬದಿಯಲ್ಲಿ ತಾತ್ಕಾಲಿಕ ಶೆಡ್‌ಗಳನ್ನು ಹಾಕಿಕೊಂಡಿದ್ದಾರೆ. ಅದಕ್ಕೆ ಅಗತ್ಯ ಅನುಮತಿ ಸಹ ಪಡೆದಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಅಂಗಡಿಗಳ ಮುಂದೆ ಡ್ರಮ್‌ಗಳನ್ನು ಇಟ್ಟು ಅದರಲ್ಲಿ ನೀರನ್ನು ಸಹ ಸಂಗ್ರಹಿಸಿದ್ದಾರೆ. ಅಲ್ಲದೆ ಪ್ರತಿ ಅಂಗಡಿಯವರು ಫೈರ್ ಸೇಫ್ಟಿ ಸಿಲಿಂಡರ್‌ಗಳನ್ನು ಇಟ್ಟಿದ್ದಾರೆ. ಕಳೆದ ಐದು ದಿನಗಳಿಂದ ಪಟಾಕಿ ಅಂಗಡಿಯವರು ವ್ಯಾಪಾರ ಮಾಡುತ್ತಿದ್ದು ಇದೀಗ ಹಬ್ಬ ಮುಕ್ತಾಯದ ಮುನ್ನ ದಿನ ಪೊಲೀಸ್ ಇಲಾಖೆಯವರು ಪಟಾಕಿ ಅಂಗಡಿಯವರಿಗೆ ನೀವು ಯಾವುದೇ ಸುರಕ್ಷತಾ ಕ್ರಮ ಅನುಸರಿಸದೆ ವಿದ್ಯುತ್ ವೈರ್‌ಗಳನ್ನು ಹಾಕಿಕೊಂಡಿರುತ್ತೀರಾ ಹಾಗೂ ಹೆದ್ದಾರಿ ಆಗಿರುವುದರಿಂದ ಟ್ರಾಫಿಕ್ ಕಿರಿಕಿರಿಯಾಗುತ್ತಿದ್ದು ಯಾವುದೇ ರೀತಿಯ ಅಪಘಾತ ಹಾಗೂ ಅನಾಹುತಗಳಾದರೆ ನಿಮ್ಮ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ನೋಟಿಸ್ ನೀಡಿರುವುದು ಹಾಸ್ಯಾಸ್ಪದವಾಗಿದೆ. ಪಟಾಕಿ ಅಂಗಡಿಗಳನ್ನು ಹಾಕಲು ಅನುಮತಿ ಯಾವ ಆಧಾರದಲ್ಲಿ ನೀಡಿದ್ದು, ಇದೀಗ ಹಬ್ಬ ಮುಕ್ತಾಯಕ್ಕೆ ಕೇವಲ ಒಂದು ದಿನ ಇರುವ ಮುನ್ನ ನೋಟಿಸ್ ನೀಡಿರುವುದೇಕೆ ಎಂಬುದು ಯಕ್ಷ ಪ್ರಶ್ನೆಯಾಗಿದೆ. ತಾಲ್ಲೂಕು ಆಡಳಿತಕ್ಕೆ ಪಟಾಕಿ ಅಂಗಡಿಗಳ ಸುರಕ್ಷತೆ ಕುರಿತು ಅಷ್ಟೊಂದು ಕಾಳಜಿ ಇದ್ದಿದರೆ ಹಿಂದೆಯೇ ಅಂಗಡಿಗಳನ್ನು ಹಾಕಲು ಅವಕಾಶ ನಿರಾಕರಿಸಬೇಕಾಗಿತ್ತು. ಆದರೆ ಹಬ್ಬ ಮುಗಿಯುವ ಮುನ್ನ ಈ ರೀತಿ ನೋಟಿಸ್ ಕೊಟ್ಟಿರುವುದು ಎಷ್ಟು ಸರಿ ಎಂಬ ಪ್ರಶ್ನೆ ಕೇಳಿ ಬಂದಿದೆ.

ಈಗಾಗಲೇ ಪಟಾಕಿ ವ್ಯಾಪಾರಸ್ಥರು ಮಳೆಯಿಂದ ವ್ಯಾಪಾರ ಇಲ್ಲದೆ ತತ್ತರಿಸಿದ್ದು ಇನ್ನು ತಾಲ್ಲೂಕು ಆಡಳಿತ ಈ ರೀತಿ ತೊಂದರೆ ಕೊಡುತ್ತಿರುವುದು ಪಟಾಕಿ ವ್ಯಾಪಾರಸ್ಥರಿಗೆ ಬೇಸರ ತಂದಿದೆ. ಮುಂದಿನ ವರ್ಷಗಳಲ್ಲಿ ಪಟಾಕಿ ವ್ಯಾಪಾರಸ್ಥರಿಗೆ ಸೂಕ್ತ ಜಾಗವನ್ನು ಮೀಸಲಿಡಲು ಮುಂದಾಗಬೇಕಾಗಿದೆ.

# ಅಪಘಾತದಲ್ಲಿ ಯುವಕ ಸಾವು, ಮತ್ತೊಬ್ಬನಿಗೆ ಗಾಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್



ಚನ್ನರಾಯಪಟ್ಟಣ: ಬೈಕ್ ಮತ್ತು ಮಾರುತಿ ಸುಜುಕಿ ಬಲೆನೋ ಕಾರು ನಡುವೆ ಅಪಘಾತ ಸಂಭವಿಸಿ ಯುವಕ ಮೃತಪಟ್ಟು ಮತ್ತೊಬ್ಬ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಹಿರೀಸಾವೆಯಲ್ಲಿ ಮಂಗಳವಾರ ನಡೆದಿದೆ.

ಹಿರೀಸಾವೆ ಗ್ರಾಮದ ಅಮ್ಮ ಕುಟೀರ ಬಡಾವಣೆಯ ಮಟನ್ ಬಾಬು ಎಂಬುವವರ ಪುತ್ರ ಇಸ್ಮಾಯಿಲ್ (22) ಮೃತ. ಮುನ್ನಾ ಎಂಬುವವರ ಪುತ್ರ ಸಲ್ಮಾನ್ ಗಾಯಗೊಂಡಿದ್ದು, ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಬ್ಬರು ಯುವಕರು ಅಣ್ಣ-ತಮ್ಮಂದಿರ ಮಕ್ಕಳಾಗಿದ್ದು, ಹಿರೀಸಾವೆಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಮಧ್ಯಾಹ್ನ ಊಟಕ್ಕೆಂದು ಬೈಕ್‌ನಲ್ಲಿ ಮನೆಗೆ ಹೋಗುತ್ತಿದ್ದಾಗ ರಾಷ್ಟ್ರೀಯ ಹೆದ್ದಾರಿ 75ರ ಸರ್ವಿಸ್ ರಸ್ತೆಯಲ್ಲಿ ಎದುರಿನಿಂದ ಬಂದ ಕಾರು ಡಿಕ್ಕಿಯಾಗಿದೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಗಳಿಗೆ ಬುದ್ದಿ ಹೇಳಿ ಅಂದಿದ್ದಕ್ಕೆ ಅಳಿಯನಿಗೆ ಥಳಿತ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಮಗಳಿಗೆ ಬುದ್ದಿವಾದ ಹೇಳಿ ಎಂದಿದ್ದಕ್ಕೆ ಮಾವ ಮತ್ತು ಬಾಮೈದ ಒಟ್ಟಾಗಿ ಅಳಿಯನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ನಗರದಲ್ಲಿ ಇತ್ತೀಚೆಗೆ ನಡೆದಿದೆ.

ನಗರದ 80 ಅಡಿ ರಸ್ತೆಯ ಆವೇಜ್ ಷರೀಫ್ ಮೇಲೆ ಹಲ್ಲೆ ನಡೆದಿದೆ. ಸೈಯದ್ ರಿಜ್ವಾನ್ ಹಾಗೂ ಸೈಯದ್ ಮುಬಾರಕ್ ಹಲ್ಲೆ ನಡೆಸಿದವರು. ರಿಜ್ವಾನ್ ಅವರ ಪುತ್ರಿ ಸೈಯದ್ ಹುಸ್ನಾರ್ ಆವೇಜ್ ಷರೀಫ್ ದಾಂಪತ್ಯ ಜೀವನದಲ್ಲಿ ಸಣ್ಣಪುಟ್ಟ ಗಲಾಟೆಗಳಾಗುತ್ತಿದ್ದವು. ಅ. 18 ರಂದು ದಂಪತಿ ನಡುವೆ ಗಲಾಟೆಯಾಗಿ ಎಷ್ಟೇ ಸಮಾಧಾನಪಡಿಸಿದರೂ ಹುಸ್ನಾರ್ ಸುಮ್ಮನಾಗದ ಹಿನ್ನಲೆಯಲ್ಲಿ ಆವೇಜ್ ಷರೀಫ್ ಮಾವನ ಮನೆಗೆ ತೆರಳಿ ಮಗಳಿಗೆ ಬುದ್ದಿವಾದ ಹೇಳುವಂತೆ ಮನವಿ ಮಾಡಿದ್ದ. ಅದಕ್ಕೆ ಆಕ್ರೋಶಗೊಂಡ ಮಾವ ಮತ್ತು ಬಾಮೈದ 80 ಅಡಿ ರಸ್ತೆಯಲ್ಲಿ ಅಡ್ಡಗಟ್ಟಿ ಮನಬಂದಂತೆ ಥಳಿಸಿದ್ದಾರೆ. ಮಚ್ಚಿನಿಂದ ಬಲಗಾಲು ಹಾಗೂ ಭುಜಕ್ಕೆ ಹೊಡೆದಿದ್ದರಿಂದ ಗಂಭೀರ ಗಾಯಗಳಾಗಿವೆ. ಈ ವೇಳೆ ಸಾರ್ವಜನಿಕರು ಜಗಳ ಬಿಡಿಸಿ ತಮ್ಮನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆಂದು ಆವೇಜ್ ತಿಳಿಸಿದ್ದಾರೆ. ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್-22

1797: ಪ್ಯಾರಿಸ್‌ನಲ್ಲಿ ಮೊದಲ ಬಾರಿಗೆ ಪ್ಯಾರಶೂಟ್‌ನಿಂದ ಮಾನವ ಹಾರಾಟ ಯಶಸ್ವಿಯಾಯಿತು. ಆಂಡ್ರೆ-ಜಾಕ್ ಗಾರ್ನೆರಿನ್ ಈ ಸಾಧನೆ ಮಾಡಿದರು.

1879: ಅಮೆರಿಕದ ವಿಜ್ಞಾನಿ ಥಾಮಸ್ ಆಲ್ವಾ ಎಡಿಸನ್ ಅವರು ವಿದ್ಯುತ್ ದೀಪದ ಪ್ರಯೋಗವನ್ನು ಯಶಸ್ವಿಯಾಗಿ ನೆರವೇರಿಸಿದರು.

1938: ಅಮೆರಿಕದ ಪ್ರಸಿದ್ಧ ಲೇಖಕ ಚೆಸ್ಟರ್ ಕಾರ್ಲ್ಸನ್ ಫೋಟೋಕಾಪಿ ಯಂತ್ರದ ಆವಿಷ್ಕಾರ ಮಾಡಿದರು.

1962: ಅಮೆರಿಕ ಮತ್ತು ಸೋವಿಯತ್ ಯೂನಿಯನ್ ನಡುವಿನ ಕ್ಯೂಬಾ ಕ್ಷಿಪಣಿ ಸಂಕಟ ಗರಿಷ್ಠ ಮಟ್ಟ ತಲುಪಿತು. ಶೀತಯುದ್ಧದ ಪ್ರಮುಖ ಕ್ಷಣಗಳಲ್ಲಿ ಒಂದು.

2008: ಭಾರತದ ಬಾಹ್ಯಾಕಾಶ ಇತಿಹಾಸದಲ್ಲಿ ಮಹತ್ವದ ದಿನ ಚಂದ್ರಯಾನ1 ಉಡಾವಣೆಗೊಂಡಿತು. ಇದು ಭಾರತದ ಮೊದಲ ಚಂದ್ರಯಾನ ಪ್ರಯೋಗವಾಗಿತ್ತು.

### ಜನನ

1811: ಫ್ರಾಂಝ್ ಲಿಸ್ಟ್, ಹಂಗೇರಿಯ ಪ್ರಸಿದ್ಧ ಪಿಯಾನೋ ವಾದಕ ಹಾಗೂ ಸಂಗೀತಗಾರ

1870: ಇವಾನ್ ಬುನಿನ್, ರಷ್ಯಾದ ಕವಿ ಹಾಗೂ ಕಥೆಗಾರ, ನೊಬೆಲ್ ಪ್ರಶಸ್ತಿ ವಿಜೇತ

1906: ಪಿ.ಎಲ್. ದೇಸಾಯಿ, ಭಾರತದ ಗಣ್ಯ ಆಡಳಿತಗಾರ ಮತ್ತು ಶಿಕ್ಷಣ ತಜ್ಞ

1952: ಶತ್ರುಘ್ನ ಸಿನ್ಹಾ, ಬಾಲಿವುಡ್ ನಟ ಮತ್ತು ರಾಜಕಾರಣಿ

### ಮರಣ

1906: ಪೌಲ್ ಸೆಜಾನ್, ಪ್ರಸಿದ್ಧ ಫ್ರೆಂಚ್ ಚಿತ್ರಕಾರ

1987: ಅಮೆರಿಕದ ಪ್ರಸಿದ್ಧ ನಟ ಲಿಂಡನ್ ಬೈನ್ಸ್ ಜಾನ್ಸನ್

# ದೀಪಾವಳಿ: ಕತ್ತಲೆ ಕಳೆದು ಬೆಳಕು ವಿಜೃಂಭಿಸಲಿ

## ದೀಪವನು ಹಚ್ಚುತಲಿ ಸಾಗುವರು ಮಹಿಳೆಯರು ಶಾಪವನು ತೊರೆವಂತೆ ಬದುಕಿನಲ್ಲಿ



- ಹೆಚ್.ಎಸ್. ಪ್ರತಿಮಾ
ಹಾಸನ

ದೂಪವನು ಹಾಕುತಲಿ ದೇವರಿಗೆ ನಮಿಸುತಲಿ
ಕೋಪವನು ದೂರವಿಡು ಲಕ್ಷ್ಮಿದೇವಿ......

ದೀಪಾವಳಿ ಹಬ್ಬದ ಪ್ರಯುಕ್ತ ಮನೆಗಳಲ್ಲಿ ನಡೆಯುವ ದೇವರ ಪೂಜೆ ವಿಶೇಷವಾಗಿದ್ದು. ದೀಪವನ್ನು ಹಚ್ಚುತ್ತಾ ಅಂಗಳಗಳಲ್ಲಿ ದೀಪಗಳನ್ನು ಇಟ್ಟು ಪೂಜಿಸುವುದು ಸರ್ವೆ ಸಾಮಾನ್ಯವಾಗಿದೆ. ಯಾವುದೇ ಶಾಪವಿರಲಿ ಅದನ್ನ ತೊರೆಯುವಂತೆ ಬೇಡಿಕೊಳ್ಳುತ್ತಾ ಬದುಕಲ್ಲಿ ಸಂತೋಷ ಕಾಣಲು ದೇವರಿಗೆ ಧೂಪವನ್ನು ಹಾಕುತ್ತಾ ನಮಿಸುತ್ತಾರೆ. ಕೋಪವನ್ನು ದೂರ ಬಿಡುವಂತೆ ಕೇಳಿಕೊಳ್ಳುತ್ತಾ ಒಳ್ಳೆಯ ಬೆಳಕು ಬದುಕಿನಲ್ಲಿ ಮೂಡುವಂತೆ ಮಾಡು ಎಂದು ಪ್ರಾರ್ಥಿಸುತ್ತಾರೆ. ದೇವರಿಗೆ ಅಭಿಷೇಕ ಮಾಡುವ ಮೂಲಕ ಐಶ್ವರ್ಯ ಮತ್ತು ಸಮೃದ್ಧಿಗಾಗಿ ಆಶೀರ್ವಾದವನ್ನು ಪಡೆಯಲು ಪೂಜಿಸುತ್ತಾರೆ.

ಕುಟುಂಬದಲ್ಲಿ ಯಾವುದೇ ಶುಭ ಆರಂಭ, ಐಶ್ವರ್ಯ, ಆರೋಗ್ಯ, ಸಮೃದ್ಧಿ, ಯೋಗಕ್ಷೇಮ ಎಲ್ಲವನ್ನು ಕರುಣಿಸುವಂತೆ ಕೇಳಿಕೊಳ್ಳುತ್ತ ಈ ದೀಪಾವಳಿಯ ಹಬ್ಬವನ್ನು ಸಂಭ್ರಮದಲ್ಲಿ ಆಚರಿಸುವುದುಂಟು. ಕುಟುಂಬದವರ ಪರವಾಗಿ ಹಿರಿಯ ಜೀವಗಳು ವಿಶೇಷವಾದ ಪೂಜೆ ಪ್ರಾರ್ಥನೆ ಅಭಿಷೇಕವನ್ನು ಮಾಡಿ ಒಳ್ಳೆಯದಾಗಲು ದೇವರಲ್ಲಿ ಪ್ರಾರ್ಥನೆ ಮಾಡಿ ಕೇಳಿಕೊಳ್ಳುವರು. ನೀವು ಏನು ಬೇಕು ಅದನ್ನು ಪೂಜೆಯ ಮುಖಾಂತರ ಕುಟುಂಬ ಸದಸ್ಯರು ಸೇರಿ ಹಬ್ಬವನ್ನು ದೀಪ ಹಚ್ಚಿ ಆಚರಿಸುತ್ತಾರೆ.

ಬೆಳಕು ಮೂಡಿಸುವ ಹಬ್ಬ ದೀಪಾವಳಿ ಹಬ್ಬ ಎಂಬ ಅರಿವು ಎಲ್ಲರಿಗೂ ಇದೆ. ಭಾರತದ ಎಲ್ಲೆಡೆಯೂ ಸಂಭ್ರಮದಿಂದ ಆಚರಿಸುವಂತಹ ಹಬ್ಬವಾಗಿದ್ದು ಇದು ಹಿಂದುಗಳ ಪವಿತ್ರವಾದ ಹಬ್ಬವಾಗಿದೆ. ದೀಪಗಳನ್ನು ಹಚ್ಚಿ ಹಬ್ಬವನ್ನು ಆಚರಿಸುವುದು ನಮ್ಮ ಸ್ತ್ರೀಯರ ವಾಡಿಕೆ. ಮನೆಯಲ್ಲಿ ಆರೋಗ್ಯ ಐಶ್ವರ್ಯ ತುಂಬಿ ತುಳುಕಲು ಈ ಹಬ್ಬವನ್ನು ಆಚರಿಸುತ್ತಾರೆ. ಭಾರತದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ದೀಪಾವಳಿಯನ್ನು ಸಂಭ್ರಮದಿಂದ ಆಚರಿಸುವುದುಂಟು. ಆಚರಿಸುವ ವಿಧಿ- ವಿಧಾನಗಳು ಸಹ ಸರ್ವೆ ಸಾಮಾನ್ಯವಾಗಿ ಒಂದೇ ತರನಾಗಿರುತ್ತದೆ. ಸಾಮಾನ್ಯವಾಗಿ 14 ವರ್ಷ ವನವಾಸದ ನಂತರದಲ್ಲಿ ಶ್ರೀ ರಾಮನು ಗೃಹಪ್ರವೇಶ ಮಾಡಿದ ದಿನವನ್ನು ಹಾಗೂ ರಾವಣನ ಮೇಲೆ ವಿಜಯವನ್ನು ಸಾಧಿಸಿದ ದಿನವನ್ನು ಈ ದೀಪಾವಳಿಯ ಹಬ್ಬದ ಸಂಭ್ರಮದಲ್ಲಿ ಆಚರಿಸುವ ಪ್ರತೀತಿ ಇದೆ. ದಕ್ಷಿಣ ಭಾಗದಲ್ಲಿ ಶ್ರೀ ಕೃಷ್ಣನು ಅಸುರ ನರಕಾಸುರನನ್ನು ವಧೆ ಮಾಡಿದ ನೆನಪಿಗೆ ಆಚರಿಸುವುದು ಎಲ್ಲರಿಗೂ ತಿಳಿದಿದೆ. ಅಷ್ಟೇ ಅಲ್ಲದೆ ಕೆಲವೇ ಬಾಲಿ ವಿರುದ್ಧದ ಅದ್ಭುತ ವಿಜಯಕ್ಕಾಗಿ ಭಗವಾನ್ ವಿಷ್ಣುವನ್ನು ಪೂಜಿಸಲಾಗುತ್ತದೆ. ದಂತೇರಸ್ ನಿಂದ ಆರಂಭವಾಗಿ ನಂತರ ನರಕ ಚತುರ್ದಶಿ ಅಶ್ವಿಜ ಕೃಷ್ಣ ಅಮಾವಾಸ್ಯೆ. ಕೇದಾರ ಗೌರಿ ವ್ರತ ಮತ್ತು ಬಲಿ ಪ್ರತಿಪದೆಯಲ್ಲಿ ಹಬ್ಬವನ್ನು ಸಂಪನ್ನಗೊಳಿಸಲು ಲಕ್ಷ್ಮಿ ಪೂಜೆಗಾಗಿ ವಿವಿಧ ಪ್ರೀತಿಯ ಯೋಚನೆಗಳನ್ನು ಮಾಡಿ ಸಂಪನ್ನಗೊಳಿಸುವುದು. ಈ ದಿನದಲ್ಲಿ ಕೆಟ್ಟ ಪ್ರಭಾವಗಳನ್ನು ಹೋಗಲಾಡಿಸಿ ಒಳ್ಳೆಯ ಗೆಲುವನ್ನು ಪಡೆಯುವ ಸೂಚನೆಯನ್ನು ಹೊಂದಿರುವುದರಿಂದ ಗೆಲುವಿಗಾಗಿ ಹಪಹಪಿಸುತ್ತಾ ಪೂಜೆಗಳನ್ನು ಹಿಂದುಗಳು ಮಾಡುವುದು ವಿಶೇಷ. ಹಿಂದು ಧರ್ಮದಲ್ಲಿ ಈ ದಿನದ ಮಹತ್ವ ಅಪಾರವಾದದ್ದು ಎಂದು ತಿಳಿದು ರಾಮನ ವಿಜಯವನ್ನು ನೆನೆದು ಸಂಭ್ರಮದಲ್ಲಿ




ಹಬ್ಬವನ್ನು ಆಚರಿಸುತ್ತಾರೆ. ಸರ್ವೆ ಸಾಮಾನ್ಯವಾಗಿ ದೀಪಾವಳಿ ಎಂಬ ಪದವು ಹಿಂದಿ ಪದವಾಗಿರುವುದನ್ನು ತಿಳಿದ ವಿಚಾರ ಅದರ ಅರ್ಥ ವನ್ನು ಪ್ರತಿಯೊಬ್ಬರು ಅರ್ಥೈಸಿಕೊಂಡಿದ್ದಾರೆ. ಬೆಳಕು ಮೂಡಿಸುವಂತಹ ದೀಪ ಹಚ್ಚುವುದರ ಮುಖಾಂತರ ಈ ಹಬ್ಬವನ್ನು ಸಂತೋಷ ದಿಂದ ಆಚರಿಸುವುದುಂಟು. ರಾಮನು ರಾವಣನನ್ನು ಸದೆಬಡೆದ ದಿನವಿದು. ಕೆಟ್ಟ ಹುಳುವಾದ ರಾವಣವನ್ನು ಸಂಹರಿಸಿ ಮನೆಗೆ ಗೃಹಪ್ರವೇಶವನ್ನು ಮಾಡುವ ದಿನವನ್ನು ವಿಶೇಷವಾಗಿ ದೀಪಾವಳಿ ಹಬ್ಬವೆಂದು ಆಚರಿಸುವುದುಂಟು. ರಾಮನು ವಿಜಯವನ್ನು ಸಾಧಿಸಿ ಅಯೋಧ್ಯೆಗೆ ಬರುವಾಗ ಜನರು ಸ್ವಾಗತವನ್ನು ಮಾಡಿ ವಿಜಯದ ಪತಾಕೆ ಯೊಂದಿಗೆ ದೀಪಗಳನ್ನು ಬೆಳಗಿಸಿ ಕೆಟ್ಟದರ ಮೇಲೆ ಒಳಿತಿನ ವಿಜಯವನ್ನು ಘೋಷಿಸಿದ ಸಂಭ್ರಮದ ದಿನವದು ದೀಪಾವಳಿಯ ಮುನ್ನಾ ದಿನದಂದು ಜನರು ಲಕ್ಷ್ಮಿ ದೇವತೆ ಹಾಗೂ ಗಣೇಶನನ್ನು ಸಂಭ್ರಮದಲ್ಲಿ ಪೂಜಿಸುತ್ತಾರೆ. ಬರುವ ಸಂಕಷ್ಟಗಳು ಅಡೆತಡೆಗಳು ನಾಶವಾಗಲೆಂದು ಈ ಪೂಜೆಯನ್ನು ಆಚರಿಸುವುದು. ಹಬ್ಬದಂದು ಬುದ್ಧಿವಂತಿಕೆ ಜ್ಞಾನಾಭಿವೃದ್ಧಿಗಾಗಿ ಪೂಜಿಸುತ್ತಾ ಸಂಪತ್ತು ಲಕ್ಷ್ಮಿಯನ್ನು ನೀಡೆಂದು ಲಕ್ಷ್ಮಿ ದೇವಿಯನ್ನು ಪೂಜಿಸುವುದುಂಟು ದೀಪಾವಳಿಯ ಪೂಜೆ ಎಂದು ಎಲ್ಲಾ ದೇವತೆಗಳ ಆಶೀರ್ವಾದ ಸಿಕ್ಕುವುದೆಂಬ ನಂಬಿಕೆ ಇದೆ. ಒಟ್ಟಾರೆ ಹಲವಾರು ಜನರು ಈ ದೀಪಾವಳಿ ಹಬ್ಬವನ್ನು ಪವಿತ್ರವಾದ ಹಿಂದುಗಳ ಹಬ್ಬವೆಂದು ಮನೆ ಮತ್ತು ಅಂಗಡಿಗಳನ್ನು ಶುಚಿಗೊಳಿಸಿ ಸಂಭ್ರಮದಲ್ಲಿ ಆಚರಿಸುತ್ತಾರೆ. ಕತ್ತಲೆಯನ್ನು ತೊಲಗಿಸಿ ಬೆಳಕಿನ ವಿಜಯವನ್ನು, ಗೆಲುವನ್ನು ತೋರಿಸುವ ಹಬ್ಬವಿದು. ಮನ ಮನೆಗಳಲ್ಲಿ ಬೆಳಕು ಮೂಡಿಸುವ ಹಬ್ಬವಿದು. ಎಲ್ಲರೊಂದಿಗೆ ಒಟ್ಟುಗೂಡಿ ಸಂಭ್ರಮದಲ್ಲಿ ಆಚರಿಸುವ ಹಬ್ಬವಿದು.

ಹಬ್ಬದ ವಿಚಾರವನ್ನು ಕೆಲವು ಪದಗಳ ರೂಪ ಹೇಳಬೇಕೆಂದರೆ
ಜ್ಞಾನವ ಮೂಡಿಸುತ
ಒಳ್ಳೆಯತನವ ನೀಡುತ
ವಿಜಯ ಸಾಧಿಸಿದ ಹಬ್ಬವಿದು.
ಸಂಪತ್ತು ಸಮೃದ್ಧಿಗಾಗಿ
ಹಪಹಪಿಸುತ ಪೂಜಿಸುವ ಹಬ್ಬವಿದು

ಸಂಸ್ಕೃತಿಯ ಉಳಿಸುತ್ತ ಬದುಕಿನ ಮುಂದಿನ ಬದುಕಿನ ಮುಂದಿನ ದಿನಗಳು ಸುಗಮವಾಗಿ ಸಾಗಲೆಂದು ಬೇಡುತ ಸಾಗುವ ಹಬ್ಬ

ಕುಟುಂಬದಲ್ಲಿ ಎಲ್ಲರೂ ಜೊತೆಗೂಡಿ ಉಡುಗೊರೆಯನ್ನು ನೀಡುತ ಸಂಭ್ರಮಿಸುವ ಹಬ್ಬವಿದು. ಹಳೆಯ ಕೊಳೆಯ ತೊಳೆದು ಹೊಸತನದಲ್ಲಿ ಚಿಗುರ ಮೂಡಿಸಲು ನಡೆಯುವ ದಾರಿಯ ಹಬ್ಬವಿದು.

ಕೆಲವು ಪದಗಳಲ್ಲಿ ಹೇಳಬೇಕಂದರೆ
ಕೆಟ್ಟಗಳಿಗೆಯನು ಕಳೆದು
ಒಳ್ಳೆಯ ಗಳಿಗೆಯ
ಆಹ್ವಾನವೇ ದೀಪಾವಳಿ.....
ಕತ್ತಲೆಯನು ಕಳೆಯೆಂದು
ಬೆಳಕನು ನೀಡೆನುತ
ಆಚರಿಸುವ ಆಸೆಯ
ಹಬ್ಬವಿದು ದೀಪಾವಳಿ......

ಈ ಹಬ್ಬದ ಬಗ್ಗೆ ಪೌರಾಣಿಕ ಕಥೆಗಳು ಬಹಳಷ್ಟುವೇ ವಿಶೇಷವಾಗಿ ನಾವು ಮೇಲೆ ತಿಳಿದಂತೆ ಶ್ರೀ ರಾಮನು ರಾವಣನ ಸಂಹರಿಸಿ ಅಯೋಧ್ಯೆಯಿಂದ ಮರಳಿದ ದಿನವೆಂದು ಆಚರಿಸುತ್ತ ದೀಪವನ್ನು ಬೆಳಗಿಸುತ್ತ ಆತನನ್ನು ಸ್ವಾಗತಿಸುವುದು ಎಲ್ಲರಿಗೂ ತಿಳಿದಿರುವ ವಿಷಯವೇ. ಅದೇ ದಿನವನ್ನು ದೀಪಾವಳಿಯ ಹಬ್ಬ ಎಂದು ಆಚರಿಸುತ್ತೇವೆ ಎಂಬುದು ನಮ್ಮ ಹಿಂದು ಸಂಸ್ಕಾರದಲ್ಲಿ ಅಚ್ಚೆಯಾಗಿದೆ. ಸೂರ್ಯನ (ಬಾಲಿ) ಸಂಹಾರವನ್ನು ಶ್ರೀ ಕೃಷ್ಣನು ಮಾಡಿದ ದಿನವಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ದಕ್ಷಿಣ ಭಾಗದಲ್ಲಿ ಅವರ ನಂಬಿಕೆಯ ಫಲವಾಗಿ ದೀಪವನ್ನು ಹಚ್ಚುತ್ತಾ ಸಂಭ್ರಮದಲ್ಲಿ ಆಚರಿಸುತ್ತಾರೆ. ವಾಮನ ದೈತ್ಯ ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ತಳ್ಳಿದ ದಿನದ ನೆನಪಿಗಾಗಿ ಬಲಿಪಾಡ್ಯಮಿಯನ್ನ ಆಚರಿಸುವುದುಂಟು.

ಈ ಹಬ್ಬದ ಪ್ರಮುಖ ಆಚರಣೆಗಳಲ್ಲಿ ನಾವು ಕಾಣುವುದೇನಂದರೆ ಪುಟ್ಟ ಪುಟ್ಟ ಮಕ್ಕಳಿಂದ ಹಿಡಿದು ದೊಡ್ಡವರು ಸಹ ದೀಪವನ್ನು ಹಚ್ಚುತ್ತ ಸಂಭ್ರಮದಲ್ಲಿ ಮನೆಯನ್ನು ಸ್ವಚ್ಛಗೊಳಿಸಿ ಪೂಜಿಸುತ ಸಂಭ್ರಮಿಸುದುಂಟು. ಪುರುಷರು-ಸ್ತ್ರೀಯರು ಸೇರಿ ಎಲ್ಲರೂ ಮನೆಯ ಕುಟುಂಬ ಸದಸ್ಯರೆಲ್ಲ ಲಕ್ಷ್ಮಿ ಪೂಜೆಯನ್ನು ಮಾಡುವುದುಂಟು. ಪ್ರತಿಯೊಬ್ಬರಿಗೂ ಸಿಹಿಯನ್ನು ನೀಡುತ ವಿಧವಿಧವಾದ ಅಡುಗೆ ಮಾಡಿ ಸವಿಯುವುದುಂಟು. ಪಟಾಕಿಗಳನ್ನು ಸಿಡಿಸುತ ಜೀವನದಲ್ಲಿ ಸಂತಸವ ನೀಡೆಂದು ಬೇಡುವುದುಂಟು ಪ್ರಪಂಚದಾದ್ಯಂತ ಈ ಹಬ್ಬವನ್ನು ಪ್ರೀತಿ, ವಿಶ್ವಾಸ, ಉತ್ಸಾಹ ಮತ್ತು ಸಂಭ್ರಮದಲ್ಲಿ ಆಚರಿಸುತ ಒಬ್ಬರಿಗೊಬ್ಬರು ಒಳ್ಳೆಯ ಭಾವವನ್ನು ತೋರುತಲಿ ಕೆಟ್ಟ ಭಾವನೆಗಳನ್ನು ಪಟಾಕಿ ಸಿಡಿಸುವ ರೀತಿಯಲ್ಲಿ ಸುಟ್ಟಾಕುವುದುಂಟು. ದೀಪಾವಳಿ ಬರುವ ಮುಂಚೆಯೇ ನಮ್ಮ ಹೆಣ್ಣು ಮಕ್ಕಳ ಕೆಲಸಗಳು ಮನೆಯಲ್ಲಿ ಪ್ರಾರಂಭವಾಗುವುದುಂಟು ದೀಪಾವಳಿ ಹಬ್ಬದ ಬರುವ ಮುಂಚಿನಿಂದಲೇ ಮನೆ, ಅಂಗಡಿ, ಕಟ್ಟಡಗಳು, ಪ್ರತಿಯೊಂದು ಜಾಗಗಳನ್ನು ಸ್ವಚ್ಛಗೊಳಿಸುತ ಹೊಸ ಉಡುಪುಗಳನ್ನು ಸಂಭ್ರಮದಲ್ಲಿ ಖರೀದಿಸುತ ಹಬ್ಬದ ದಿನಗಳಲ್ಲಿ ಧರಿಸುತ್ತ ಹಬ್ಬಕ್ಕೆ ಸಜ್ಜಾಗುವುದುಂಟು ದೀಪಾವಳಿ ಹಬ್ಬವು ಸಂತೋಷವನ್ನು ತರಲೆಂದು ಆಶಿಸುತ್ತಾ ಆಚರಿಸುವುದುಂಟು. ಈ ಹಬ್ಬದ ಪ್ರಮುಖ ಪಾತ್ರಧಾರಿಗಳು ಎಂದರೆ ಮಕ್ಕಳು ಎಲ್ಲರೂ ಸಹ ಕಡಿಮೆ ಪಟಾಕಿಗಳನ್ನು ಬಳಸುತ್ತ, ಗಮನವನ್ನು ನೀಡುತ್ತಾ ಹಬ್ಬವನ್ನು ಸಂತೋಷದಲ್ಲಿ ಆಚರಿಸುತ ಸಂಭ್ರಮದಲ್ಲಿ ಹಬ್ಬವನ್ನು ಆಚರಿಸಲೆಂದು ಆಶಿಸುತ್ತೇನೆ. ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳು ಜೈ ಹಿಂದ್ ಜೈ ಭಾರತ ಮಾತೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248